ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಮಾನ್ಯ ವಿಧಾನ ಸಭೆಯ ಸದಸ್ಯರು ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 648ಕ್ಕೆ ಉತ್ತರ

ಉತ್ತರಿಸಬೇಕಾದ ದಿನಾಂಕ: 23.03.2017

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | "ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ ಯೋಜನೆ" ಯನ್ನು ಯಾವಾಗ ಜಾರಿಗೆ ತರಲಾಯಿತು; ಈ ಯೋಜನೆಯ ರೂಪುರೇಷೆಗಳೇನು (ಸಂಪೂರ್ಣ ಮಾಹಿತಿ ನೀಡುವುದು); | ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡಲು ಇಚ್ಚಿಸುವ ಹಿಂದುಳಿದ ವರ್ಗಗಳ 100 ವಿದ್ಯಾರ್ಥಿಗಳಿಗೆ ವಾರ್ಷಿಕ ಗರಿಷ್ಠ 10 ಲಕ್ಷ ರೂ.ಗಳಂತೆ ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನವನ್ನು ನೀಡುವ ಕಾರ್ಯಕ್ರಮವನ್ನು 2015-16ನೇ ಸಾಲಿನಿಂದ ಜಾರಿಗೆ ತರಲಾಯಿತು. ಈ ಕಾರ್ಯಕ್ರಮದ ಸಂಪೂರ್ಣ ಮಾಹಿತಿ ಒಳಗೊಂಡಿರುವ ಸರ್ಕಾರದ ಆದೇಶವನ್ನು ಇದರೊಂದಿಗೆ ಲಗತ್ತಿಸಿದೆ. |
| ಆ) | ಈ ಯೋಜನೆಯು ಜಾರಿಯಾದಾಗಿನಿಂದ ಇದೂವರೆಗೂ ಮೀಸಲಿಟ್ಟ ಅನುದಾನವೆಷ್ಟು ಹಾಗೂ ಖರ್ಚು ಮಾಡಲಾದ ಅನುದಾನವೆಷ್ಟು (ಸಂಪೂರ್ಣ ಮಾಹಿತಿ ನೀಡುವುದು); | 2015-16ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ 99 ವಿದ್ಯಾರ್ಥಿಗಳನ್ನು ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನಕ್ಕೆ ಆಯ್ಕೆ ಮಾಡಿದ್ದು, ಸದರಿ ಕಾರ್ಯಕ್ರಮಕ್ಕಾಗಿ ಮೀಸಲಿಟ್ಟಿದ್ದ 1000 ಲಕ್ಷ ರೂ.ಗಳಲ್ಲಿ 894.26 ಲಕ್ಷ ರೂ.ಗಳನ್ನು ವಿನಿಯೋಗಿಸಲಾಗಿದೆ. 2016-17ನೇ ಸಾಲಿನಲ್ಲಿ ಸದರಿ ಕಾರ್ಯಕ್ರಮಕ್ಕಾಗಿ ಮೀಸಲಿಟ್ಟಿದ್ದ 8500 ಲಕ್ಷ ರೂ.ಗಳಲ್ಲಿ 767.76 ಲಕ್ಷ ರೂ.ಗಳನ್ನು 83 ನವೀಕರಣ ವಿದ್ಯಾರ್ಥಿಗಳಿಗೆ ವಿನಿಯೋಗಿಸಲಾಗಿದೆ. ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ. |
| ಇ) | ಈ ಯೋಜನೆಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡವಾಗ ಅನುಸರಿಸಲಾಗುವ ಮಾನದಂಡಗಳೇನು; ಆಯ್ಕೆಯಾದ ಪ್ರತಿ ವಿದ್ಯಾರ್ಥಿಗೆ ನೀಡಲಾಗಿರುವ ಅನುದಾನದ ಮೊತ್ತವೆಷ್ಟು; | <u>ನಿಗದಿ ಪಡಿಸಿರುವ ಅರ್ಹತೆಗಳು:</u><br>1. ಸ್ನಾತಕೋತ್ತರ ಪದವಿ/ಪಿಹೆಚ್.ಡಿ/ಸಂಶೋಧನೆಗೆ – ಸಂಬಂಧಪಟ್ಟ ಪದವಿ/ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇಕಡ 60 ಅಂಕಗಳು ಅಥವಾ ಸಮಾನವಾದ ಗ್ರೇಡ್ ಪಡೆದಿರಬೇಕು.<br>2. ವಯೋಮಿತಿ – ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ವಿದ್ಯಾರ್ಥಿಯ ವಯಸ್ಸು 35 ವರ್ಷದ ಮಿತಿಯೊಳಗಿರಬೇಕು.<br>3. ಆದಾಯ ಮಿತಿ – ಅರ್ಜಿದಾರರ ಮತ್ತು ಕುಟುಂಬದ ಒಟ್ಟು ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ ರೂ.6.00 ಲಕ್ಷದ ಮಿತಿಯೊಳಗಿರಬೇಕು.<br>4. ವಿದ್ಯಾರ್ಥಿಯು ಭಾರತ ದೇಶದ ಪ್ರಜೆಯಾಗಿದ್ದು, ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.<br>5. ತಂದೆ & ತಾಯಿ/ಪೋಷಕರ ಒಬ್ಬ ಮಗ/ಒಬ್ಬ ಮಗಳಿಗೆ ಮಾತ್ರ ಈ ಧನಸಹಾಯವನ್ನು ಒಂದು ಬಾರಿಗೆ ಮಾತ್ರ ನೀಡಲಾಗುವುದು.<br><u>ಆಯ್ಕೆ ವಿಧಾನ:</u><br>1. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಗೆ ವಿದ್ಯಾರ್ಥಿಯು ನಿಗದಿತ ನಮೂನೆಯಲ್ಲಿ ಅಗತ್ಯ |

<table>
<tr><td></td><td></td><td>ದಾಖಲೆಗಳೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು.<br>2. ಸಂಬಂಧಪಟ್ಟ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಯು ವಿದ್ಯಾರ್ಥಿಯ ಮೂಲ ದಾಖಲೆಗಳ ಪರಿಶೀಲನೆ ಮಾಡುವರು.<br>3. ಆಯ್ಕೆ ಸಮಿತಿಯು ವಿದ್ಯಾರ್ಥಿಯ ವೈಯಕ್ತಿಕ ಸಂದರ್ಶನ ನಡೆಸುತ್ತದೆ.<br>4. ನಿಗದಿಪಡಿಸಿರುವ ಮೀಸಲಾತಿ.<br>
<table>
<tr><th>ಕ್ರ.ಸಂ.</th><th>ಪ್ರವರ್ಗ</th><th>ಶೇಕಡವಾರು</th></tr>
<tr><td>1</td><td>1</td><td>24%</td></tr>
<tr><td>2</td><td>2ಎ</td><td>46%</td></tr>
<tr><td>3</td><td>3ಎ</td><td>14%</td></tr>
<tr><td>4</td><td>3ಬಿ</td><td>16%</td></tr>
<tr><td></td><td></td><td>100%</td></tr>
</table>
5. ಸದರಿ ಕಾರ್ಯಕ್ರಮದಡಿ ಪ್ರತಿ ಪ್ರವರ್ಗದಲ್ಲಿ ಶೇಕಡ 33%ರಷ್ಟು ಮಹಿಳಾ, ಶೇಕಡ 5% ರಷ್ಟು ಗ್ರಾಮೀಣ ಮತ್ತು ಶೇಕಡ 3% ರಷ್ಟು ವಿಕಲ ಚೇತನ ವಿದ್ಯಾರ್ಥಿಗಳಿಗೆ ಮೀಸಲಾತಿ ನಿಗದಿಪಡಿಸಲಾಗಿದೆ.<br>ಆಯ್ಕೆಯಾದ ಪ್ರತಿ ವಿದ್ಯಾರ್ಥಿಗೆ ವಾರ್ಷಿಕ ಗರಿಷ್ಠ 10 ಲಕ್ಷ ರೂ.ಗಳಂತೆ ಡಿ.ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನವನ್ನು ನೀಡಲಾಗುವುದು.<br>ವಿವರವನ್ನು ಅನುಬಂಧ-1 ರಲ್ಲಿ ನೀಡಿದೆ.</td></tr>
<tr><td>ಈ)</td><td>ಈ ಯೋಜನೆಯ ಸದುಪಯೋಗ ಪಡೆದುಕೊಂಡ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ಹೆಸರು, ವಿದ್ಯಾರ್ಹತೆ ಹಾಗೂ ವಿಳಾಸದೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು)?</td><td>ಹಿಂದುಳಿದ ವರ್ಗಗಳ 99 ವಿದ್ಯಾರ್ಥಿಗಳು ಈ ಯೋಜನೆಯ ಸದುಪಯೋಗ ಪಡೆದುಕೊಂಡಿರುತ್ತಾರೆ.<br>ಹೆಸರು, ವಿದ್ಯಾರ್ಹತೆ ಹಾಗೂ ವಿಳಾಸದೊಂದಿಗೆ ಸಂಪೂರ್ಣ ಮಾಹಿತಿಯನ್ನು ಅನುಬಂಧ-1 ರಲ್ಲಿ ನೀಡಿದೆ.</td></tr>
</table>

ಆಯುಕ್ತರು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಬೆಂಗಳೂರು.